**ಇಂದು ದಿನಾಂಕಃ 04-03-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ ಎಸ್.ಬಿ.ಕೆ ವಕೀಲರಿಂದಃ-**

ನಿಪಿ-4 ರ ಭಾವಚಿತ್ರದಲ್ಲಿರುವ ಒಡಣಿ ಮಾರುಕಟ್ಟೆಯಲ್ಲಿ ಸಾಮಾನ್ಯವಾಗಿ ಸಿಗುತ್ತವೆ ಎಂದರೆ ಸರಿ. ಈ ಪ್ರಕರಣದಲ್ಲಿ ಒಂದು ಒಡಣಿಯನ್ನು ಜಪ್ತಿ ಮಾಡಲಾಗಿದೆ. ನನ್ನ ಜಪ್ತಿ ಪಂಚನಾಮೆಯಲ್ಲಿ ಕೆಂಪು ಮತ್ತು ನೀಲಿ ಬಣ್ಣದ ಒಡಣಿ ಎಂದು ಉಲ್ಲೇಖವಾಗಿದೆ. ಕೆಂಪು ಮತ್ತು ನೀಲಿ ಬಣ್ಣದ ಮಿಶ್ರಿತ ಒಡಣಿ ಎಂದು ಉಲ್ಲೇಖವಾಗಿಲ್ಲ.

ಸುಳ್ಳು ದೂರಿನ ಮೇಲೆ ಸುಳ್ಳು ತನಿಖೆಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನೇ ಫ್ರಾಸಾ-3 ರವರ ಅಣ್ಣನಿಗೆ ಕರೆಸಿ ಸುಳ್ಳು ದೂರನ್ನು ಪಡೆದು ಆರೋಪಿ ಸರಕಾರಿ ನೌಕರನಿದ್ದ ಕಾರಣ ಅವನಿಗೆ ಸತಾಯಿಸಲು ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ತನಿಖೆ ಮಾಡಲು ನನಗೆ ಅಧಿಕಾರ ವ್ಯಾಪ್ತಿ ಇರದಿದ್ದರು ಸಹ ಸುಳ್ಳು ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**